ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 31–3–2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್ ಟಾಪ್ ವಿತರಣೆ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ | 1–4–2015<br>ಗುರುವಾರ<br>ಸಂಜೆ<br>4–00 ಗಂಟೆಗೆ | ಕೃಷ್ಣಾ,<br>ಮುಖ್ಯಮಂತ್ರಿಗಳ ಗೃಹ ಕಚೇರಿ,<br>ಬೆಂಗಳೂರು |
| 2 | ಪರಿಶಿಷ್ಟ ಜಾತಿ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ಮತ್ತು ಡಿಜಿಟಲ್ ಕ್ಯಾಮೆರಾ ವಿತರಣೆ<br><br>ಡಾ: ನಾಗಾಂಬಿಕಾದೇವಿ<br>ಪ್ರಧಾನ ಕಾರ್ಯದರ್ಶಿಗಳು,<br>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ | 1–4–2015<br>ಗುರುವಾರ<br>ಸಂಜೆ<br>5–00 ಗಂಟೆಗೆ | ಸುಲೋಚನಾ ಸಭಾಂಗಣ,<br>ವಾರ್ತಾ ಸೌಧ,<br>ಭಗವಾನ್ ಮಹಾವೀರ ರಸ್ತೆ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

### ಹಿರಿಯ ಪತ್ರಕರ್ತ ಯಗಟಿ ಕೃಷ್ಣಮೂರ್ತಿ ಅವರ ನಿಧನಕ್ಕೆ ವಾರ್ತಾ ಸಚಿವರ ಕಂಬನಿ

ಬೆಂಗಳೂರು, ಮಾರ್ಚ್ 31 ( ಕರ್ನಾಟಕ ವಾರ್ತೆ ) :

*ಬಿಸಿನೆಸ್ ಸ್ಟ್ಯಾಂಡರ್ಡ್* ಸೇರಿದಂತೆ ಹಲವು ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದ್ದ ಹಿರಿಯ ಪತ್ರಕರ್ತ ಶ್ರೀ ಯಗಟಿ ಕೃಷ್ಣಮೂರ್ತಿ ಅವರ ನಿಧನಕ್ಕೆ ವಾರ್ತಾ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಕಂಬನಿ ಮಿಡಿದಿದ್ದಾರೆ.

ಆರ್ಥಿಕ ವಿಚಾರಗಳ ಬಗ್ಗೆ ಅಧಿಕಾರವತ್ತಾಗಿ ಬರೆಯುತ್ತಿದ್ದ ಶ್ರೀ ಯಗಟಿ ಕೃಷ್ಣಮೂರ್ತಿ ಅವರು ಹಣಕಾಸು ಪತ್ರಿಕೋದ್ಯಮದಲ್ಲಿ ವಿಶೇಷ ಛಾಪು ಮೂಡಿಸಿದ್ದರು. ಶ್ರೀ ಯಗಟಿ ಕೃಷ್ಣಮೂರ್ತಿ ಅವರ ಅರ್ಥಗರ್ಭಿತ ಬಜೆಟ್ ವಿಶ್ಲೇಷಣೆಗಳು ಅರ್ಥಲೋಕದಲ್ಲಿಯೇ ಅರ್ಥಪೂರ್ಣವಾಗಿರುತ್ತಿದ್ದವು.

ಶ್ರೀ ಯಗಟಿ ಕೃಷ್ಣಮೂರ್ತಿ ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಹಾಗೂ ಅವರ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಕರುಣಿಸಲಿ ಎಂದು ವಾರ್ತಾ ಸಚಿವರು ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

ಬಾಬು/ಕೆಎಂ

## ಪತ್ರಕರ್ತ ಯಗಟಿ ಕೃಷ್ಣಮೂರ್ತಿ ಅವರ ನಿಧನಕ್ಕೆ ವಿಧಾನ ಸಭೆ ಸಂತಾಪ

**ಬೆಂಗಳೂರು, ಮಾರ್ಚ್ 31 ( ಕರ್ನಾಟಕ ವಾರ್ತೆ ) :**

ರಾಜ್ಯ ವಿಧಾನ ಸಭೆಯು ಇಂದು ಸಮಾವೇಶಗೊಳ್ಳುತ್ತಿದ್ದಂತೆಯೇ ವಿಧಾನ ಸಭಾ ಅಧ್ಯಕ್ಷ ಶ್ರೀ ಕಾಗೋಡು ತಿಮ್ಮಪ್ಪ ಅವರು ಹಿರಿಯ ಪತ್ರಕರ್ತ ಯಗಟಿ ಕೃಷ್ಣಮೂರ್ತಿ ಅವರ ನಿಧನಕ್ಕೆ ಸಂತಾಪ ಸೂಚಕ ನಿರ್ಣಯ ಮಂಡಿಸಿ ಅವರ ಗುಣಗಾನ ಮಾಡಿದರು.

ನಂತರ ವಿಧಾನ ಸಭೆಯು ಎದ್ದುನಿಂತು ಒಂದು ನಿಮಿಷ ಮೌನ ಆಚರಿಸಿ ತನ್ನ ಸಂತಾಪ ವ್ಯಕ್ತಪಡಿಸಿತು.

ಬಾಬು/ಕೆಎಂ

## ಹಣ್ಣಿನ ಬಣ್ಣಕ್ಕೆ ರಾಸಾಯನಿಕ ಇಲ್ಲ

**ಬೆಂಗಳೂರು, ಮಾರ್ಚ್ 31 ( ಕರ್ನಾಟಕ ವಾರ್ತೆ ) :**

ಕಲ್ಲಂಗಡಿ ಹಣ್ಣು ಕೆಂಪಾಗಿ ಕಾಣಲು ರಾಸಾಯನಿಕ ಬಳಕೆ ಮಾಡಿರುವುದಿಲ್ಲವೆಂದು ಕೃಷಿ ಸಚಿವ ಕೃಷ್ಣಭೈರೇಗೌಡ ಸ್ಪಷ್ಟಪಡಿಸಿದರು. ಇತ್ತೀಚೆಗೆ ಕೆಲವು ಮಾಧ್ಯಮಗಳಲ್ಲಿ ಕಲ್ಲಂಗಡಿ ಹಣ್ಣಿಗ ಎರಿತ್ರೋಸಿನ್ ಬಿ

ಎಂಬ ರಾಸಾಯನಿಕವನ್ನು ಬಳಕೆ ಮಾಡಿ ಬಣ್ಣವನ್ನು ಕೊಡುವ ಮೂಲಕ ಸಾರ್ವಜನಿಕರಿಗೆ ವಿಷಕಾರಿಕಗಳನ್ನು ತಿನ್ನಿಸಲಾಗುತ್ತಿದೆ ಎಂದು ವರದಿಯಾಗಿದ್ದ ಹಿನ್ನೆಲೆಯಲ್ಲಿ ವಿಧಾನ ಪರಿಷತ್ತಿನ ಪ್ರಶ್ನೋತ್ತರ ಕಲಾಪದಲ್ಲಿ ಶಾಸಕ ಕೋಟಾ ಶ್ರೀನಿವಾಸ ಪೂಜಾರಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು ಈ ಬಗ್ಗೆ ಪರಿಶೀಲಿಸಲಾಗಿದ್ದು ಅಂತಹ ಯಾವುದೇ ಪ್ರಕರಣ ಬೆಳಕಿಗೆ ಬಂದಿರುವುದಿಲ್ಲ. ಈ ಸುದ್ದಿ ಸತ್ಯಕ್ಕೆ ದೂರವಾದುದಾಗಿದೆ ಎಂದರು.

ಮಾಧ್ಯಮಗಳಲ್ಲಿ ವರದಿಯಾದ ಕೂಡಲೇ ರೈತರಿಂದ ಸರಬರಾಜಾದ ಕಲ್ಲಂಗಡಿ ಹಣ್ಣುಗಳನ್ನು ರ್‍ಯಾಂಡಮ್ ಸ್ಯಾಂಪಲಿಂಗ್ ಮಾಡಿಸಿ, ಪೂನಾದಲ್ಲಿರುವ ಪ್ರಯೋಗಾಲಯಕ್ಕೆ ವಿಶ್ಲೇಷಣೆಗಾಗಿ ಕಳುಹಿಸಲಾಗಿತ್ತು. ಅಲ್ಲಿಂದ ಬಂದಿರುವ ವರದಿಯ ಪ್ರಕಾರ ಕಲ್ಲಂಗಡಿ ಬೆಳೆಯಲ್ಲಿ ಕೃತಕ ಬಣ್ಣ ನೀಡುವ ಎರಿತ್ರೋಸಿನ್ ಬಿ ಅಂಶಗಳು ಕಂಡುಬಂದಿರುವುದಿಲ್ಲ. ಹಾಗೆಯೇ ತೋಟಗಾರಿಕೆ ಇಲಾಖೆಯ ಜೈವಿಕ ಕೇಂದ್ರದಲ್ಲಿಯೂ ಪ್ರಯೋಗಗಳನ್ನು ನಡೆಸಲಾಗಿದ್ದು, ಎರಿತ್ರೋಸಿನ್ ಬಿ ಚುಚ್ಚುಮದ್ದನ್ನು ಕಲ್ಲಂಗಡಿ ಹಣ್ಣಿಗೆ ಚುಚ್ಚಿದ 24 ಗಂಟೆಗಳ ನಂತರ ಚಚ್ಚಿದ ಜಾಗದಲ್ಲಿ ಮಾತ್ರ ಕಡು ಗುಲಾಬಿ ಬಣ್ಣಕ್ಕೆ ತಿರುಗಿದ್ದು ಕಂಡುಬಂದಿದೆ ಎಂದು ಸದನಕ್ಕೆ ಮಾಹಿತಿ ನೀಡಿದರು.

ಬಾಳೆಹಣ್ಣು ಮತ್ತು ಮಾವಿನ ಹಣ್ಣುಗಳನ್ನು ಇದೇ ರೀತಿ ಅವೈಜ್ಞಾನಿಕವಾಗಿ ಹಣ್ಣು ಮಾಡಲಾಗುತ್ತಿದೆ ಎಂಬ ದೂರು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರವು ಮಾರುಕಟ್ಟೆಗಳಲ್ಲಿ ವೈಜ್ಞಾನಿಕವಾಗಿ ಹಣ್ಣು ಮಾಡಲು ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯಲ್ಲದೆ ಆರೋಗ್ಯ ಇಲಾಖೆಯ ವತಿಯಿಂದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ಅಡಿಯಲ್ಲಿ ಕೃತಕ ಬಣ್ಣಗಳ ಬಳಕೆ ಮತ್ತು ಅವುಗಳ ಸೇವನೆಯಿಂದ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ಬಾಬು/ಪೂರ್ಣಿಮ/ಕೆಎಂ

## ಮಾರ್ಕೋಪೋಲೋ: ವಿಚಾರಣೆಗೆ ಆದೇಶ

ಬೆಂಗಳೂರು, ಮಾರ್ಚ್ 31 ( ಕರ್ನಾಟಕ ವಾರ್ತೆ ) :

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಖರೀದಿಸಲಾದ ಟಾಟಾ ಹವಾನಿಯಂತ್ರಿತವಲ್ಲದ ಮಾರ್ಕೋಪೋಲೋ ಬಸ್ಸುಗಳಿಂದ ಆಗಿರುವ ನಷ್ಟದ ವಿಚಾರಣೆಗೆ ಆರ್ಥಿಕ ಇಲಾಖೆಯ ಕಾರ್ಯದರ್ಶಿ ನೇತೃತ್ವದಲ್ಲಿ ತನಿಖೆ ನಡೆಸಲು ಆದೇಶಿಸಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿಂದು ಪ್ರಶ್ನೋತ್ತರ ಕಲಾಪದಲ್ಲಿ ಶಾಸಕ ಬಿ. ಜೆ. ಪುಟ್ಟಸ್ವಾಮಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಈ ಬಸ್ಸುಗಳನ್ನು ಅವಧಿಗಿಂತಲೂ ಮೊದಲೇ ನಿಷ್ಕ್ರೀಯಗೊಳಿಸುವ ಪರಿಸ್ಥಿತಿ ಉಂಟಾದ

ಹಿನ್ನೆಲೆಯಲ್ಲಿ  ಸಂಸ್ಥೆಗೆ ಆಗಿರುವ ನಷ್ಟಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ತನಿಖೆಗೆ ಆದೇಶಿಸಲಾಗಿದೆ.  ಮೂರು  ತಿಂಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸೂಚಿಸಲಾಗಿದೆ ಎಂದು ಹೇಳಿದರು.

ಬಾಬು/ಪೂರ್ಣಿಮ/ಕೆಎಂ